**A**

**CCE RF/RR/
PF/PR**

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ,
ಮಲ್ಲೇಶ್ವರಂ, ಬೆಂಗಳೂರು – 560 003

**KARNATAKA SCHOOL EXAMINATION AND ASSESSMENT BOARD,**
**MALLESHWARAM, BENGALURU – 560 003**

ಮೇ 2026 ರ ಪರೀಕ್ಷೆ - 2

**MAY 2026 EXAMINATION - 2**

# ಮಾದರಿ ಉತ್ತರಗಳು

# MODEL ANSWERS

ಸಂಕೇತ ಸಂಖ್ಯೆ : **33-K** CODE NO. : **33-K**

## ವಿಷಯ : ದ್ವಿತೀಯ ಭಾಷೆ — ಕನ್ನಡ

## Subject : Second Language — KANNADA

(ಶಾಲಾ ಅಭ್ಯರ್ಥಿ / ಶಾಲಾ ಪುನರಾವರ್ತಿತ ಅಭ್ಯರ್ಥಿ / ಖಾಸಗಿ ಅಭ್ಯರ್ಥಿ / ಖಾಸಗಿ ಪುನರಾವರ್ತಿತ ಅಭ್ಯರ್ಥಿ)

**(Regular Fresh / Regular Repeater / Private Fresh / Private Repeater)**

ದಿನಾಂಕ : 20. 05. 2026 ] [ ಗರಿಷ್ಠ ಅಂಕಗಳು : 80

**Date : 20. 05. 2026 ] [ Max. Marks : 80**

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| I. | ಬಹು-ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) : | 4 × 1 = 4 |
| 1. | ಅನುಸ್ವಾರವನ್ನು ಹೊಂದಿದ ಪದ<br>(ಎ) ಕಾಫೀ (ಬಿ) ಸಂತೋಷ<br>(ಸಿ) ತಕರಾರು (ಡಿ) ವ್ಯಾಪಾರ<br>*ಉತ್ತರ :* (ಬಿ) ಸಂತೋಷ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 2. | ಇದು ಆದೇಶ ಸಂಧಿ<br>(ಎ) ಮಳೆಗಾಲ (ಬಿ) ಗುರುವನ್ನು<br>(ಸಿ) ನಿನಗಲ್ಲದೆ (ಡಿ) ಮಹಾನುಭಾವ<br>***ಉತ್ತರ :*** (ಎ) ಮಳೆಗಾಲ | |
| 3. | 'ಮೂಡಣ' ಎಂಬುದು<br>(ಎ) ಗುಣವಾಚಕ (ಬಿ) ಪರಿಮಾಣವಾಚಕ<br>(ಸಿ) ಪ್ರಕಾರ ವಾಚಕ (ಡಿ) ದಿಗ್ವಾಚಕ<br>***ಉತ್ತರ :*** (ಡಿ) ದಿಗ್ವಾಚಕ | |
| 4. | ಸಪ್ತಮಿ ವಿಭಕ್ತಿಯ ಕಾರಕಾರ್ಥ<br>(ಎ) ಅಧಿಕರಣ (ಬಿ) ಸಂಬಂಧ<br>(ಸಿ) ಕರ್ಮಾರ್ಥ (ಡಿ) ಅಪಾದಾನ<br>***ಉತ್ತರ :*** (ಎ) ಅಧಿಕರಣ | |
| **II.** | **ಒಂದೊಂದು ವಾಕ್ಯದಲ್ಲಿ ಉತ್ತರಿಸುವಿಕೆ**<br>**(ವಾಕ್ಯರೂಪದಲ್ಲಿ ಬರೆದ ಪ್ರತಿ ಸರಿ ಉತ್ತರಕ್ಕೆ ಒಂದು ಅಂಕ) :** | **12 × 1 = 12** |
| 5. | ಶ್ರೀ ಪಂಡಿತಾರಾಧ್ಯ ಶಿವಾಚಾರ್ಯರ ಪ್ರಕಾರ ಈ ನಾಡಿನ ಬೆನ್ನೆಲುಬು ಯಾರು ?<br>***ಉತ್ತರ :***<br>ಶ್ರೀ ಪಂಡಿತಾರಾಧ್ಯ ಶಿವಾಚಾರ್ಯರ ಪ್ರಕಾರ ಈ ನಾಡಿನ ಬೆನ್ನೆಲುಬು ರೈತ (ಕೃಷಿಕ). | |
| 6. | ತಾಯಿ ಸಿದ್ಧಮ್ಮ ಪಂಚಾಕ್ಷರಿ ಗವಾಯಿಗಳಲ್ಲಿ ಏನೆಂದು ಬೇಡಿಕೊಂಡಳು ?<br>***ಉತ್ತರ :***<br>ತಾಯಿ ಸಿದ್ಧಮ್ಮ ಪಂಚಾಕ್ಷರಿ ಗವಾಯಿಗಳಲ್ಲಿ ಮಗನನ್ನು ಮನೆಗೆ ಕಳುಹಿಸುವಂತೆ ಬೇಡಿಕೊಂಡಳು. | |
| 7. | ಅಸ್ಪೃಶ್ಯತೆ ಆಚರಿಸುವ ಮನುಷ್ಯನಿಗೆ ಹಕ್ಕಿಗಳು ಯಾವ ಪಾಠ ಹೇಳುತ್ತವೆ ?<br>***ಉತ್ತರ :***<br>ಅಸ್ಪೃಶ್ಯತೆ ಆಚರಿಸುವ ಮನುಷ್ಯನಿಗೆ ಹಕ್ಕಿಗಳು ಸ್ಪರ್ಶ ಸಂಜೀವಿನಿಯ ಪಾಠ ಹೇಳುತ್ತವೆ. | |
| 8. | ಗಂಗೆಯಲ್ಲಿ ತೇಲುತ್ತಿದ್ದ ನೂರಾರು ದೀಪಗಳು ಹೇಗೆ ಕಾಣುತ್ತಿದ್ದವು ?<br>***ಉತ್ತರ :***<br>ಗಂಗೆಯಲ್ಲಿ ತೇಲುತ್ತಿದ್ದ ನೂರಾರು ದೀಪಗಳು ನದಿಯ ಬಟ್ಟೆಗೆ ಬೆಳಕಿನ ಕಸೂತಿ ಹಾಕಿದಂತೆ ಕಾಣುತ್ತಿದ್ದವು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 9. | ಗೋಪಾಲನ ಬೆಳಗಿನ ಮುಖ್ಯ ಕೆಲಸ ಯಾವುದಾಗಿತ್ತು ?<br>***ಉತ್ತರ :***<br>ಬನಕ್ಕೆ ಹೋಗಿ ಗೋಪಾಲನ ಪೂಜೆಗೆ ಬೇಕಾದ ಹೂವುಗಳನ್ನು ತರುವುದು ಗೋಪಾಲನ ಬೆಳಗಿನ ಮುಖ್ಯ ಕೆಲಸವಾಗಿದೆ. | |
| 10. | ಹಾ.ಮಾ. ನಾಯಕರು ಹೇಳುವಂತೆ ರೋಗಿಗಳು ಯಾರ ಬಳಿ ಹೋಗುತ್ತಾರೆ ?<br>***ಉತ್ತರ :***<br>ಹಾ.ಮಾ. ನಾಯಕರು ಹೇಳುವಂತೆ ರೋಗಿಗಳು ವೈದ್ಯರ ಬಳಿ ಹೋಗುತ್ತಾರೆ. | |
| 11. | ಚೈತ್ರದಲ್ಲಿ ಯಾವುದರ ವಾಲಗ ನಡೆದಿರುತ್ತದೆ ?<br>***ಉತ್ತರ :***<br>ಚೈತ್ರದಲ್ಲಿ ಖಗ, ಪಕ್ಷಿ, ಪ್ರಾಣಿಗಳ ಧ್ವನಿಯ ನೆಲಮುಗಿಲ ವಾಲಗ ನಡೆದಿರುತ್ತದೆ. | |
| 12. | ನಮ್ಮ ಕರ್ತವ್ಯಗಳನ್ನು ಹೇಗೆ ಮುಗಿಸಬೇಕೆಂದು ಕವಿ ಸಿ.ಪಿ.ಕೆ.ಯವರು ಹೇಳಿದ್ದಾರೆ ?<br>***ಉತ್ತರ :***<br>ನಮ್ಮ ಕರ್ತವ್ಯಗಳನ್ನು ಕವಿ ಶಾಂತ ರೀತಿಯಿಂದ ಸದ್ದುಗದ್ದಲವಿಲ್ಲದೆ ಮಾಡಿ ಮುಗಿಸಬೇಕೆಂದು ಕವಿ ಸಿ.ಪಿ.ಕೆ.ಯವರು ಹೇಳಿದ್ದಾರೆ. | |
| 13. | ಕುಣಿಗಲ್ ಕೆರೆಯ ಅಂದವನ್ನು ನೋಡಲು ಯಾರು ಬಂದರೆಂದು ಉತ್ಪ್ರೇಕ್ಷಿಸಲಾಗಿದೆ ?<br>***ಉತ್ತರ :***<br>ಕುಣಿಗಲ್ ಕೆರೆಯ ಅಂದವನ್ನು ನೋಡಲು ಶಿವನು ಬಂದರೆಂದು ಉತ್ಪ್ರೇಕ್ಷಿಸಲಾಗಿದೆ. | |
| 14. | ವೇಷ ಮತ್ತು ಆಚರಣೆಗಳ ನಡುವಿನ ಸಂಬಂಧ ಹೇಗಿರಬೇಕೆಂದು ಸಿದ್ಧರಾಮರು ಹೇಳುತ್ತಾರೆ ?<br>***ಉತ್ತರ :***<br>ವೇಷ ಮತ್ತು ಆಚರಣೆಗಳ ನಡುವಿನ ಸಂಬಂಧ ಒಂದೇ ಆಗಿರಬೇಕೆಂದು ಸಿದ್ಧರಾಮರು ಹೇಳುತ್ತಾರೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 15. | ಬೆಟ್ಟದ ಮೇಲೆ ಮನೆಯ ಮಾಡಿದರೆ ಯಾವುದಕ್ಕೆ ಅಂಜಬಾರದು ?<br>***ಉತ್ತರ :***<br>ಬೆಟ್ಟದ ಮೇಲೆ ಮನೆಯ ಮಾಡಿದರೆ ಮೃಗಗಳಿಗೆ ಅಂಜಬಾರದು. | |
| 16. | ಧುರಕೆ ಬೆನ್ನುಹಾಕಿದರೆ ಏನು ಪ್ರಾಪ್ತಿಯಾಗುತ್ತದೆ ?<br>***ಉತ್ತರ :***<br>ಧುರಕೆ ಬೆನ್ನುಹಾಕಿದರೆ ಪಾತಕ (ಪಾಪ) ಪ್ರಾಪ್ತಿಯಾಗುತ್ತದೆ. | |
| **III.** | **ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವುದು (ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಸರಿ ಉತ್ತರಕ್ಕೆ ಎರಡು ಅಂಕಗಳು) :** | **8 × 2 = 16** |
| 17. | ಕೃಷಿಕರು ಭೂಮಿಯನ್ನು ಉಳುವುದಿಲ್ಲ ಎಂದು ಸತ್ಯಾಗ್ರಹ ಮಾಡಿದರೆ ಏನಾಗಬಹುದು ?<br>***ಉತ್ತರ :***<br>ಕೃಷಿಕರು ಭೂಮಿಯನ್ನು ಉಳುವುದಿಲ್ಲ ಎಂದು ಸತ್ಯಾಗ್ರಹ ಮಾಡಿದರೆ ಜಗತ್ತು ತೊಂದರೆಗೆ ಒಳಗಾಗುತ್ತದೆ. ಆಹಾರವಿಲ್ಲದೆ ಬರೀ ವೈಜ್ಞಾನಿಕ ಬೆಳವಣಿಗೆಯಿಂದ ಬದುಕಲು ಸಾಧ್ಯವಿಲ್ಲ. ನಾವು ಯಾವ ಕಾರ್ಖಾನೆಯಿಂದಲೂ ಟೊಮೆಟೊ ತಯಾರಿಸಲು, ಅಕ್ಕಿ ಪಡೆಯಲು, ರಾಗಿ ಬೆಳೆಯಲು ಆಗುವುದಿಲ್ಲ. ಇದಕ್ಕೆಲ್ಲ ಭೂಮಿಯೇ ಬೇಕು. ರೈತನ ಬೆವರು ಭೂಮಿಗೆ ಸುರಿಯಬೇಕಾಗಿದೆ. | |
| 18. | ಹಕ್ಕಿಗಳು ಗೂಡನ್ನು ಎಲ್ಲೆಲ್ಲಿ ಕಟ್ಟಬಲ್ಲವು ವಿವರಿಸಿ.<br>***ಉತ್ತರ :***<br>ಹಕ್ಕಿಗಳು ತಮಗಿರುವ ಅಪೂರ್ವವಾದ ಹಾರಾಟದ ಶಕ್ತಿಯಿಂದ ಸಾಗರದ್ವೀಪ, ಗಿರಿಶಿಖರಗಳ ನೆತ್ತಿ, ನಿರ್ಜನ ವನಶ್ರೇಣಿ, ಕಗ್ಗತ್ತಲ ಕಣಿವೆ, ಹಿಮಶೀತಲ ಧ್ರುವಪ್ರದೇಶ ಎಲ್ಲೆಂದರಲ್ಲಿ ಗೂಡುಗಳನ್ನು ನಿರ್ಮಿಸುತ್ತವೆ. | |
| 19. | ಮಹಾಭಾರತದಲ್ಲಿ ಗಂಗಾದ್ವಾರದ ಬಗ್ಗೆ ಉಲ್ಲೇಖಗೊಂಡಿರುವ ಪ್ರಸಂಗಗಳನ್ನು ತಿಳಿಸಿ.<br>***ಉತ್ತರ :*** | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಗಂಗಾದ್ವಾರದಲ್ಲಿ ಶಂತನುವಿನ ತಂದೆ ಪ್ರದೀಪನು ತಪಸ್ಸು ಆಚರಿಸಿದ್ದನು. ಭಾರದ್ವಜನು ಅಪ್ಸರೆಯಾದ ಘೃತಾಚಿಯನ್ನು ಮೋಹಿಸಿ ದ್ರೋಣಾಚಾರ್ಯನ ಹುಟ್ಟಿಗೆ ಕಾರಣನಾದದ್ದು ಇಲ್ಲಿಯೇ. ಅರ್ಜುನನು ತನ್ನ ತೀರ್ಥಯಾತ್ರೆ ಸಂದರ್ಭದಲ್ಲಿ ನಾಗಲೋಕದ ಕನ್ಯೆ ಉಲೂಪಿಯನ್ನು ವರಿಸಿದ್ದು ಇದೇ ಸ್ಥಳದಲ್ಲಿ. ಇವು ಮಹಾಭಾರತದಲ್ಲಿ ಉಲ್ಲೇಖಗೊಂಡ ಪ್ರಸಂಗಗಳಾಗಿವೆ. | |
| 20. | ಸೌಜನ್ಯದ ವರ್ತನೆಯ ಗುರುತುಗಳು ಯಾವುದು ? | |
| | ***ಉತ್ತರ :*** | |
| | ಬಳಿಗೆ ಬಂದವರು ಏನು ಹೇಳುತ್ತಾರೆ ಎಂಬುದನ್ನು ತಾಳ್ಮೆಯಿಂದ ಕೇಳಬೇಕು. ಆಗುತ್ತದೋ ಇಲ್ಲವೋ ಎಂಬುದನ್ನು ಮೃದುವಾಗಿ ಹೇಳಬೇಕು. ಇಷ್ಟರಲ್ಲಿಯೇ ಸೌಜನ್ಯ ಇರುತ್ತದೆ. ಇನ್ನೊಬ್ಬರ ವಿಷಯದಲ್ಲಿ ನಮ್ಮ ವರ್ತನೆ ಹೇಗಿರುತ್ತದೆ ಎಂಬುದಷ್ಟೇ ಸೌಜನ್ಯದ ಗುರುತಾಗಿರುತ್ತದೆ. | |
| 21. | ಕೆರೆಯಲ್ಲಿ ಕಬ್ಬಕ್ಕಿಗಳು ಯಾವಾಗ ಬಾಯಿ ಬಿಡುತ್ತವೆ ? | |
| | ***ಉತ್ತರ :*** | |
| | ಕುಣಿಗಲ್ ಕೆರೆಯು ವಿಶಾಲವಾದ ಕೆರೆಯಾಗಿದೆ. ಅನೇಕ ಜೀವಿಗಳಿಗೆ ಆಶ್ರಯವನ್ನು ನೀಡಿದೆ. ಜನರ ಬದುಕಿನ ಆಧಾರವೂ ಆಗಿದೆ. ಅದರಲ್ಲಿರುವ ಚಿಕ್ಕ ಚಿಕ್ಕ ಜಲಚರಗಳನ್ನು ತಿನ್ನಲು ಕಬ್ಬಕ್ಕಿಗಳು ಬಾಯ ತೆರೆದು ಹಾರಾಡುತ್ತಿರುತ್ತವೆ. ಅದನ್ನು ಜನಪದರು ಕಬ್ಬಕ್ಕಿ ಬಾಯ ಬಿಡುತಾವೆ ಎಂದು ವರ್ಣಿಸಿ ಹೇಳಿದ್ದಾರೆ. | |
| 22. | ಬಸವಣ್ಣನವರು 'ದೇಹವೇ ದೇಗುಲ'ವೆಂಬ ಕಲ್ಪನೆಯನ್ನು ಹೇಗೆ ವರ್ಣಿಸಿದ್ದಾರೆ ? | |
| | ***ಉತ್ತರ :*** | |
| | ಬಸವಣ್ಣನವರು ಉಳ್ಳವರು ಶಿವಾಲಯವನ್ನು ಕಟ್ಟುವರು ನಾನೇನು | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಮಾಡಲಿ ಬಡವನಯ್ಯ ಎಂದು ಪ್ರಶ್ನಿಸುತ್ತಾರೆ. ಮುಂದುವರೆದು ನನ್ನ ಕಾಲುಗಳೇ ಕಂಬ, ದೇಹವೇ ದೇಗುಲ, ನನ್ನ ಶಿರವೇ ಹೊನ್ನ ಕಳಶವಯ್ಯ ಎನ್ನುತ್ತಾರೆ. ನಿರಾಕಾರ ಪರಮಾತ್ಮನು ನನ್ನ ಅಂತರಂಗದಲ್ಲಿದ್ದಾನೆ. ಆದ್ದರಿಂದ ಎನ್ನ ದೇಹವೇ ದೇಗುಲ ಎಂದು ಸ್ಪಷ್ಟಪಡಿಸುತ್ತಾರೆ. ಉಳ್ಳವರು ಕಟ್ಟುವ ಸ್ಥಾವರದ ದೇಗುಲಕ್ಕೆ ಅಳಿವಿದೆ. ಆದರೆ ಅಳಿವಿಲ್ಲವೆಂದು ಹೇಳಿರುವುದು ಅರ್ಥಪೂರ್ಣವಾಗಿದೆ. | |
| 23. | ವೈದ್ಯರು ಭೀಮನಾಯಕನ ಮಗುವಿನ ಪ್ರಾಣವನ್ನು ಉಳಿಸಿದ ರೀತಿಯನ್ನು ವಿವರಿಸಿ. | |
| | ***ಉತ್ತರ :*** | |
| | ವೈದ್ಯರು ಭೀಮನಾಯಕನ ಮಗುವಿನ ನಾಡಿಯನ್ನು ಹಿಡಿದು ಜ್ವರದ ತೀವ್ರತೆಯನ್ನು ಪರೀಕ್ಷಿಸಿದರು. ತಮ್ಮಲ್ಲಿದ್ದ ಔಷಧಿಯನ್ನು ಮಗುವಿಗೆ ಕುಡಿಸಿದರು. ಕತ್ತಲೆಯ ರಾತ್ರಿಯಲ್ಲಿ ಕಾಡಿನಲ್ಲಿ ಅಲೆದು ತಮಗೆ ಬೇಕಾದ ಸೊಪ್ಪನ್ನು ಹುಡುಕಿ ತಂದರು. ಮತ್ತೊಮ್ಮೆ ಸೊಪ್ಪಿನ ರಸದೊಂದಿಗೆ ಔಷಧಿಯನ್ನು ಕುಡಿಸಿದರು. ತಮ್ಮ ಕುಪ್ಪಿಯಲ್ಲಿದ್ದ ಲೇಹವನ್ನು ಹಣೆಯ ತುಂಬ ಬಳಿದರು. ಕೋಳಿ ಕೂಗುವ ಹೊತ್ತಿಗೆ ಮಗು ನಿಚ್ಚಳವಾಗಿ ಕಣ್ಣು ತೆರೆದಿತ್ತು. ಮೈ ಬೆವರಿನಿಂದ ನೆನೆದಿತ್ತು. ಭೀಮನಾಯಕನು ವೈದ್ಯರಿಗೆ ಕೃತಜ್ಞತೆಯನ್ನು ಹೇಳಿದನು. ಈ ರೀತಿಯಾಗಿ ವೈದ್ಯರು ಭೀಮನಾಯಕನ ಮಗನ ಪ್ರಾಣ ಉಳಿಸಿದರು. | |
| 24. | ಹೊಳೆಯ ದಂಡೆಯ ಸಾಲಿನಲ್ಲಿ ಹಿಂದಿನ ಯಾವ ನೆನಪುಗಳಿವೆ ವಿವರಿಸಿ. | |
| | ***ಉತ್ತರ :*** | |
| | 'ಹೊಂಗೆ ಬೇವುಗಳ ಹಾಡು' ಕವಿತೆಯಲ್ಲಿ ಬರುವ ಹೊಳೆಯ ದಂಡೆಯ ಸಾಲಿನಲ್ಲಿ ರಾಜ್ಯಗಳು ಹುಟ್ಟಿ ರಾಜ್ಯಗಳು ಅಳಿದು ಹೋದ ನೆನಪುಗಳಿವೆ. ಅಲ್ಲಿಯೇ ನೇಗಿಲಯೋಗಿಯು ಶತ ಶತಮಾನಗಳಿಂದ ನಡೆಸಿದ ಸಂತೆ, ಜಾತ್ರೆ, ಗೊಬ್ಬರದ ಹಾಡಿನ ನೆನಪುಗಳಿವೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| **IV.** | **ಕವಿ / ಸಾಹಿತಿಯ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯುವುದು :** | **1 × 3 = 3** |
| | ಜನ್ಮಸ್ಥಳ, ಕಾಲ | 1 ಅಂಕ |
| | ಕೃತಿಗಳು, ಪ್ರಶಸ್ತಿ | 1 ಅಂಕ |
| | ವಾಕ್ಯರೂಪದಲ್ಲಿ ಬರೆಯುವುದು, ಭಾಷಾಶೈಲಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 25. | *ಬಸವರಾಜ ಸಾದರ :*<br>***ಉತ್ತರ :***<br>ಬಸವರಾಜ ಸಾದರ ಇವರು ಧಾರವಾಡ ಜಿಲ್ಲೆಯ ಕುಂದಗೋಳದಲ್ಲಿ ೧೯೫೪ ರಂದು ಜನಿಸಿದರು. ಇವರು 'ಸಿಸಿಫಸರ ಸುತ್ತು' (ಕವನ ಸಂಕಲನ), 'ತಪ್ದಂಡ' (ಕಥಾಸಂಕಲನ), 'ಹೊಸ ಆಲೋಚನೆ' (ವಿಮರ್ಶೆ), 'ಮೃದುವಾಗಿ ಮುಟ್ಟು' (ಪ್ರಬಂಧ) ಮೊದಲಾದ ಕೃತಿಗಳನ್ನು ಬರೆದಿದ್ದಾರೆ. ಇವರಿಗೆ ಅ.ಭಾ. ಆಕಾಶವಾಣಿ ಸ್ಪರ್ಧೆ ಬಹುಮಾನ, ಜಯತೀರ್ಥ ರಾಜಪುರೋಹಿತ ಸ್ಮಾರಕ ಬಹುಮಾನ ಹಾಗೂ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳು ದೊರೆತಿವೆ. | |
| **V.** | **ಪದ್ಯದ ಸಾರಾಂಶವನ್ನು ವಾಕ್ಯರೂಪದಲ್ಲಿ ಬರೆಯುವುದು :** | **1 × 3 = 3** |
| | ಪಠ್ಯಾಂಶಕ್ಕೆ | 2 ಅಂಕಗಳು |
| | ಪದ ಬಳಕೆ ಮತ್ತು ಶೈಲಿ | 1 ಅಂಕ |
| | ಒಟ್ಟು | 3 ಅಂಕಗಳು |
| 26. | ಹಸಿಸೌದೆ ಬುಸುಗುಟ್ಟಿ ದನಿಯನೆತ್ತುವುದಲ್ತೆ,<br>ಕಿಡಿ ಸೋಕೆ ಮದ್ದು ಸಿಡಿದಬ್ಬರಿಪುದು<br>ಅಂತಿರದೆ ರವಿಕರಕೆ ಕರಗುವಿಬ್ಬನಿವೊಲಿರು;<br>ಸಿಡುಕು ಮಿಡುಕನು ತೊರೆದು ಮೌನಿಯಾಗು !<br>***ಉತ್ತರ :***<br>ಈ ಪದ್ಯಭಾಗವನ್ನು ಸಿ.ಪಿ. ಕೃಷ್ಣಕುಮಾರ್ ಅವರ 'ಬೊಗಸೆ' ಕವನಸಂಕಲನದ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | 'ಸದ್ದು ಮಾಡದಿರು' ಎಂಬ ಪದ್ಯದಿಂದ ಆರಿಸಿಕೊಳ್ಳಲಾಗಿದೆ.<br>ಕವಿ ಸಿ.ಪಿ.ಕೆ. ಅವರು ಸದ್ದುಗದ್ದಲದೊಡನೆ ಮಾಡುವ ಕಾರ್ಯಗಳು ನಿಯಮಿತ ಸಮಯದಲ್ಲಿ ಪೂರ್ಣಗೊಳ್ಳುವುದಿಲ್ಲ. ಮನಸ್ಸು ಉದ್ವೇಗಕ್ಕೆ ಒಳಗಾಗಿ ಅಶಾಂತಗೊಂಡು ಮಾಡುವ ಕಾರ್ಯ ಅಸಫಲಗೊಳ್ಳುತ್ತದೆ. ಅದಕ್ಕೆ ನಿದರ್ಶನವೆಂಬಂತೆ ಹಸಿಸೌದೆ ಬುಸುಗುಟ್ಟಿ ಹೊಗೆ ಎಬ್ಬಿಸುತ್ತದೆ. ಮದ್ದು ಕಿಡಿಸೋಕಿದ ತಕ್ಷಣ ಸಿಡಿದು ಅಬ್ಬರಿಸಿ ನಾಶಹೊಂದುತ್ತದೆ. ನಮ್ಮ ಜೀವನ ಹೀಗಾಗಬಾರದು. ರವಿಯ ಕಿರಣಗಳಿಗೆ ಸದ್ದಿಲ್ಲದೆ ಕರಗುವ ಇಬ್ಬನಿಯಂತೆ ಸಿಡುಕು ಮಿಡುಕುಗಳನ್ನು ತೊರೆದು ಶಾಂತರೀತಿಯಿಂದ ನಮ್ಮ ಕರ್ತವ್ಯಗಳನ್ನು ಮಾಡಿ ಮುಗಿಸಬೇಕೆಂದು ಕವಿ ಹೇಳಿದ್ದಾರೆ. | |
| **VI.** | **ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯ ಮಾಡುವುದು :** | **1 × 3 = 3** |
| | ಅಲಂಕಾರವನ್ನು ಹೆಸರಿಸುವುದು | 1 ಅಂಕ |
| | ಲಕ್ಷಣ ಮತ್ತು ಸಮನ್ವಯಗೊಳಿಸುವುದು | 2 ಅಂಕಗಳು |
| | ಒಟ್ಟು | 3 ಅಂಕಗಳು |
| 27. | "ಕೌರವನ ಸೇನೆಯು ಸಾಗರದಂತೆ ವಿಶಾಲವಾಗಿದೆ."<br>***ಉತ್ತರ :***<br>*ಅಲಂಕಾರದ ಹೆಸರು :* ಉಪಮಾಲಂಕಾರ<br>*ಲಕ್ಷಣ :* ಒಂದು ಮತ್ತೊಂದರಂತೆ ಇದೆ ಎಂದು ಹೋಲಿಸಿ ವರ್ಣಿಸುವುದನ್ನು ಉಪಮಾಲಂಕಾರ ಎನ್ನುತ್ತೇವೆ.<br>*ಉಪಮೇಯ :* ಕೌರವನ ಸೇನೆ<br>*ಉಪಮಾನ :* ಸಾಗರ<br>*ಉಪಮಾವಾಚಕ :* ಅಂತೆ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಸಮಾನಧರ್ಮ: ವಿಶಾಲತೆ | |
| | ಸಮನ್ವಯ: ಈ ವಾಕ್ಯದಲ್ಲಿ 'ಕೌರವನ ಸೇನೆ' ಎಂಬ ಉಪಮೇಯವನ್ನು 'ಸಾಗರ' ಎಂಬ ಉಪಮಾನಕ್ಕೆ 'ಅಂತೆ' ಎಂಬ ಉಪಮಾವಾಚಕದ ಮೂಲಕ ಕೌರವನ ಸೇನೆ 'ವಿಶಾಲವಾಗಿರುವ' ರೀತಿಯನ್ನು ಸಮಾನಧರ್ಮದೊಂದಿಗೆ ಹೋಲಿಸಿ ವರ್ಣಿಸಿರುವುದರಿಂದ ಇದು ಉಪಮಾಲಂಕಾರಕ್ಕೆ ಉದಾಹರಣೆಯಾಗಿದೆ. | |
| **VII.** | **ಗಾದೆಯನ್ನು ವಿಸ್ತರಿಸಿ ಬರೆಯುವುದು : (ಯಾವುದಾದರೂ ಒಂದಕ್ಕೆ ಮಾತ್ರ)** | **1 × 3 = 3** |
| | ಗಾದೆಯ ಮಹತ್ವದ ವಿವರಣೆ | 1 ಅಂಕ |
| | ಉದಾಹರಣೆಯೊಂದಿಗೆ ಅರ್ಥ ವಿವರಣೆ | 1 ಅಂಕ |
| | ಭಾಷಾಶೈಲಿಗೆ-ಪದಬಂಧಗಳಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 28. | ಅ ಶಕ್ತಿಗಿಂತ ಯುಕ್ತಿ ಮೇಲು | |
| | **ಅಥವಾ** | |
| | ಹಾಸಿಗೆ ಇದ್ದಷ್ಟು ಕಾಲು ಚಾಚು | |
| **VIII.** | **ಸಂದರ್ಭವನ್ನು ಸ್ವಾರಸ್ಯದೊಂದಿಗೆ ಬರೆಯುವುದು :** | **5 × 3 = 15** |
| | ಕೃತಿ, ಕರ್ತೃ ಮತ್ತು ಪದ್ಯದ ಹೆಸರು | 1 ಅಂಕ |
| | ಯಾರು-ಯಾರಿಗೆ, ಸಂದರ್ಭ | 1 ಅಂಕ |
| | ಭಾಷಾಶೈಲಿ, ಪದಬಂಧಗಳಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 29. | "ಅದಕ್ಕೂ ಒಳ್ಳೆಯ ದಿನ ಬರಲಿ ಎಂದು ಹಾರೈಸಬೇಕು" | |
| | ***ಉತ್ತರ :*** | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಈ ವಾಕ್ಯವನ್ನು ಅ.ರಾ. ಮಿತ್ರರವರು ಬರೆದಿರುವ 'ಮಹಾಭಾರತ ಪಾತ್ರ ಸಂಗತಿಗಳು' ಕೃತಿಯಿಂದ ಆಯ್ದ 'ಒಣಮರದ ಗಿಳಿ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.<br><br>ಈ ಮಾತನ್ನು ಗಿಳಿಯು ಇಂದ್ರನಿಗೆ ಹೇಳುತ್ತದೆ. ಇಂದ್ರನು ಗಿಳಿಯನ್ನು ಇಂಥ ಒಣಮರದಲ್ಲಿ ಏಕೆ ವಾಸ ಮಾಡುತ್ತಿದ್ದೀಯಾ ? ಎಂದು ಕೇಳಿದಾಗ ಗಿಳಿಯು "ಈ ಮರ ನನಗೆ ಹಲವಾರು ವರ್ಷಗಳಿಂದ ಆಶ್ರಯ ನೀಡಿದೆ, ಹಣ್ಣು ಕೊಟ್ಟಿದೆ, ನೆರಳು ನೀಡಿದೆ. ತನ್ನ ಹಸಿರು ಬಣ್ಣದಿಂದ ನನ್ನ ಮನಸ್ಸಿಗೆ ಮುದ ನೀಡಿದೆ. ಆದರೆ ಈಗ ದುರದೃಷ್ಟದಿಂದ ಮರವನ್ನು ರೋಗ, ಬಡತನಗಳು ಕಿತ್ತು ತಿನ್ನುತ್ತಿವೆ ಇಂತಹ ಸ್ಥಿತಿಯಲ್ಲಿ ಮರವನ್ನು ಬಿಟ್ಟು ಬೇರೆ ಕಡೆ ಹೋಗಿ ಮರಕ್ಕೆ ಕೃತಘ್ನನಾಗಲು ನನಗೆ ಇಷ್ಟವಿಲ್ಲ" ಎಂದು ಹೇಳಿತು. ಸುಖ ಸಂಪತ್ತಿನ ಕಾಲದಲ್ಲಿ ಜೊತೆಗಿದ್ದವರು ದುರ್ಭರ ಗಳಿಗೆಯಲ್ಲಿಯೂ ಅವರೊಡನಿದ್ದು ಉಪಕಾರ ಸ್ಮರಣೆ ಮಾಡಬೇಕು. ಅದಕ್ಕೂ ಒಳ್ಳೆಯ ದಿನ ಬರಲಿ ಎಂದು ಹಾರೈಸಬೇಕು ಎಂದು ತನ್ನ ತತ್ವನಿಷ್ಠೆಯನ್ನು ತೋರಿಸಿತು.<br><br>ಇಲ್ಲಿ ಗಿಳಿಯ ತತ್ವನಿಷ್ಠೆ ಹಾಗೂ ಉಪಕಾರ ಸ್ಮರಣೆ ಗುಣದ ಸ್ವಾರಸ್ಯವನ್ನು ಕಾಣಬಹುದಾಗಿದೆ. | |
| 30. | "ಸಮಾಜದ ಹಣದಿಂದ ನನಗೆ ವಿದ್ಯೆ ಕೊಟ್ಟಿದ್ದಾರೆ."<br>***ಉತ್ತರ :***<br>ಈ ವಾಕ್ಯವನ್ನು ರಮೇಶಗೌಡ ಎಂ.ಕೆ. ಅವರು ಬರೆದಿರುವ 'ಗಾನಯೋಗಿ ಡಾ. ಪಂಡಿತ ಪುಟ್ಟರಾಜ ಕವಿ ಗವಾಯಿಗಳು' ಎಂಬ ಜೀವನಚರಿತ್ರೆಯಿಂದ ಆಯ್ದ 'ಗಾನಯೋಗಿ ಪಂಡಿತ ಪುಟ್ಟರಾಜ ಗವಾಯಿ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.<br><br>ಈ ಮಾತನ್ನು ಪುಟ್ಟಯ್ಯನು ತಮ್ಮ ತಾಯಿ ಸಿದ್ಧಮ್ಮನವರಿಗೆ ಹೇಳಿದ್ದಾರೆ. ಸಿದ್ಧಮ್ಮ ತಾಯಿ ಪಂಚಾಕ್ಷರ ಗವಾಯಿಗಳ ಅಪ್ಪಣೆಪಡೆದು | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಪುಟ್ಟರಾಜರನ್ನು ಮನೆಗೆ ಬರುವಂತೆ ಕೇಳಿಕೊಂಡರು. ಪುಟ್ಟಯ್ಯನ ಮನಸ್ಸು ದೃಢವಾಗಿತ್ತು. "ನನಗೆ ನನ್ನ ಸರ್ವಸ್ವವೂ ಗುರುಗಳು. ಸಮಾಜದ ಹಣದಿಂದ ನನಗೆ ವಿದ್ಯೆ ಕೊಟ್ಟಿದ್ದಾರೆ. ಸಮಾಜದ ಋಣವನ್ನು ತೀರಿಸದೆ ಅದು ಹೇಗೆ ನಿನ್ನ ಜೊತೆ ಬರಲಿ ತಾಯಿ, ನೀನೆ ಹೇಳು ? ಭವದಲ್ಲಿಯ ಎಲ್ಲ ಬಂಧನಗಳನ್ನು ತೊಡೆದುಹಾಕಿರುವೆ ಗುರು ಪಂಚಾಕ್ಷರರೇ ನನ್ನ ಸರ್ವಸ್ವ. ಅವರ ಆಜ್ಞಾಧಾರಕ ನಾನು. ನನ್ನ ಮಗನೆಂಬ ಭಾವವನ್ನು ತೊಡೆದುಹಾಕಿ ನನ್ನನ್ನು ಸಮಾಜಕ್ಕರ್ಪಿಸು ತಾಯಿ" ಎಂದು ಆರ್ತರಾದರು. ಇಲ್ಲಿ ಗುರು-ಶಿಷ್ಯ ಹಾಗೂ ತಾಯಿ-ಮಗನ ಸಂಬಂಧ ವಾತ್ಸಲ್ಯ ಪೂರ್ಣವಾಗಿದೆ. | |
| 31. | "ನಿಮಗೆಲ್ಲ ಒಳ್ಳೆಯ ಕಾಫೀ ಮಾಡಿಕೊಂಡು ಬರುತ್ತೇನೆ." | |
| | ***ಉತ್ತರ :*** | |
| | ಈ ವಾಕ್ಯವನ್ನು ಡಾ. ಗುರುರಾಜ ಕರ್ಜಗಿಯವರು ಬರೆದಿರುವ 'ಕರುಣಾಳು ಬಾ ಬೆಳಕೆ' ಅಂಕಣ ಬರೆಹದಿಂದ ಆಯ್ಕೆ ಮಾಡಿಕೊಳ್ಳಲಾದ 'ಕಾಫೀ ಕಪ್ಪು' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ. | |
| | ಈ ಮಾತನ್ನು ನಿವೃತ್ತ ಹೆಡ್ ಮಾಸ್ತರರು ತಮ್ಮ ಹಳೆಯ ವಿದ್ಯಾರ್ಥಿಗಳಿಗೆ ಹೇಳುತ್ತಾರೆ. ಹೆಡ್ ಮಾಸ್ತರರು ಮನೆಗೆ ಬಂದ ಹಳೆಯ ವಿದ್ಯಾರ್ಥಿಗಳನ್ನು ಮನೆಯಲ್ಲಿ ಕೂರಿಸಿ ಮಾತನಾಡುತ್ತಿದ್ದರು. ವಿದ್ಯಾರ್ಥಿಗಳು ತಮಗಿರುವ ತೊಂದರೆಗಳನ್ನು ಹೇಳಿಕೊಳ್ಳುತ್ತಿರುವಾಗ "ಮಕ್ಕಳೆ ಒಂದು ಐದು ನಿಮಿಷ ಇರಿ. ನಿಮಗೆಲ್ಲ ಒಳ್ಳೆಯ ಕಾಫೀ ಮಾಡಿಕೊಂಡು ಬರುತ್ತೇನೆ. ನನ್ನ ಹೆಂಡತಿ ಹೋಗಿ ಕೆಲವರ್ಷವಾಯಿತು. ಆದರೆ ನನ್ನ ಕಾಫೀ ಕೂಡ ಚೆನ್ನಾಗಿರುತ್ತದೆ." ಎಂದು ಜೋರಾಗಿ ನಕ್ಕು ಅಡುಗೆಮನೆಗೆ ಹೋದರು. ಇಲ್ಲಿ ಗುರು-ಶಿಷ್ಯರ ನಡುವಿನ ಅವಿನಾಭಾವ ಸಂಬಂಧ ಸ್ವಾರಸ್ಯಕರವಾಗಿ ಅಭಿವ್ಯಕ್ತಗೊಂಡಿದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 32. | "ಅಮ್ಮನ ಮಾತು ಸುಳ್ಳಾಗಲಾರದು." <br> ***ಉತ್ತರ :*** <br> ಈ ವಾಕ್ಯವನ್ನು ಕುವೆಂಪುರವರು ಬರೆದಿರುವ 'ನನ್ನ ಗೋಪಾಲ' ಎಂಬ ನಾಟಕದಿಂದ ಆಯ್ದ 'ನನ್ನ ಗೋಪಾಲ' ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ. <br> ಈ ಮಾತನ್ನು ಗೋಪಾಲನು ಹೇಳುತ್ತಾನೆ. "ಸಂಜೆ ಶಾಲೆಯಿಂದ ಕಾಡನ್ನು ದಾಟಿ ಮನೆಗೆ ಬರುವಾಗ ನಿನಗೆ ಹೆದರಿಕೆಯಾದರೆ ನಿನ್ನ ಅಣ್ಣ ಗೋಪಾಲನನ್ನು ಕರೆ; ಅವನು ಬಂದು ಕಾಡು ದಾಟಿಸುತ್ತಾನೆ." ಎಂದು ಅಮ್ಮ ಮಗ ಗೋಪಾಲನಿಗೆ ಹೇಳಿದ್ದಳು. ಸಂಜೆ ಶಾಲೆಯಿಂದ ಮನೆಗೆ ಮರಳುವಾಗ ಕಾಡಿನ ದಾರಿಯಲ್ಲಿ ಹೆದರಿಕೆಯಾಗುತ್ತದೆ. ಅಮ್ಮ ಹೇಳಿದ ಮಾತನ್ನು ನೆನಪಿಸಿಕೊಂಡು ಗೋಪಾಲನು ಬನದ ಗೋಪಾಲನನ್ನು ಕೂಗಿ ಕರೆಯುತ್ತಾನೆ. ಆಗ ಯಾವುದೇ ಪ್ರತಿಕ್ರಿಯೆ ಬಾರದಿದ್ದಾಗ. ಅಮ್ಮ ಹೇಳಿದ ಮಾತು ಸುಳ್ಳಾಗಲಾರದು ಎಂದುಕೊಂಡು ಮತ್ತೊಮ್ಮೆ ಕೂಗುತ್ತಾನೆ. ಆಗ ಬನದ ಗೋಪಾಲನಿಂದ ಪ್ರತಿಕ್ರಿಯೆ ಬರುತ್ತದೆ. ಇಲ್ಲಿ ಗೋಪಾಲನಿಗೆ ತನ್ನ ತಾಯಿಯ ಮಾತಿನ ಮೇಲಿರುವ ನಂಬಿಕೆ ಸ್ವಾರಸ್ಯಕರವಾಗಿ ಮೂಡಿಬಂದಿದೆ. | |
| 33. | "ಶಿವಶಿವ ಕಾದಿಗೆಲಿದೆವು" <br> ***ಉತ್ತರ :*** <br> ಈ ವಾಕ್ಯವನ್ನು ಕುಮಾರವ್ಯಾಸ ರಚಿಸಿದ 'ಕರ್ಣಾಟ ಭಾರತ ಕಥಾಮಂಜರಿ' ಅಥವಾ 'ಗದುಗಿನ ಭಾರತ' ಎಂಬ ಕೃತಿಯಿಂದ ಆಯ್ದ 'ನಿಟ್ಟೋಟದಲಿ ಹಾಯ್ದನು ಬಿಟ್ಟ ಮಂಡೆಯಲಿ' ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಈ ಮಾತನ್ನು ಉತ್ತರಕುಮಾರನು ವಿಶಾಲವಾದ ಕೌರವರ ಸಾಗರದಂತಿರುವ ಸೈನ್ಯವನ್ನು ನೋಡಿ ಹೇಳುತ್ತಾನೆ. ಸಾಗರದಂತಿರುವ ಸೈನ್ಯವನ್ನು ನೋಡಿ ಹೇಳುತ್ತಾನೆ. ಸಾಗರದಂತಿರುವ ಕೌರವರ ಸೈನ್ಯವನ್ನು ನೋಡಿದ ಉತ್ತರನು ಭಯಭೀತನಾಗುತ್ತಾನೆ. ಕಣ್ಣುಗಳಿಗೆ ಏನೂ ಕಾಣುತ್ತಿಲ್ಲ. ಮನಸ್ಸಿಗೆ ಏನೂ ತೋಚುತ್ತಿಲ್ಲ. ಜೀವವಿದ್ದರೆ ನಾಳಿನ ಅದ್ಭುತವನ್ನು ಕಾಣಬಹುದು. ಈ ಭೂಮಿಯೇ ಸೈನ್ಯವನ್ನು ಹೆತ್ತಂತೆ ಕಾಣುತ್ತಿದೆ. ಶಿವಶಿವ ಇವರೊಡನೆ ಕಾದು ಗೆಲ್ಲಲು ಸಾಧ್ಯವಿಲ್ಲ ಎಂದುಕೊಳ್ಳುತ್ತಾನೆ. ಈ ಸೈನ್ಯವನ್ನು ಗೆಲ್ಲಲು ಸಾಕ್ಷಾತ್ ಶಿವನಿಂದ ಮಾತ್ರ ಸಾಧ್ಯ ನನ್ನಿಂದ ಸಾಧ್ಯವಿಲ್ಲವೆಂದು ಶತ್ರು ಸೈನ್ಯಕ್ಕೆ ನಮೋ ಎನ್ನುತ್ತಾನೆ.<br><br>ಇಲ್ಲಿ ಉತ್ತರಕುಮಾರನ ಅಂಜುಬುರುಕತನದ ಪ್ರಸಂಗ ಹಾಸ್ಯಮಯವಾಗಿ ಅಭಿವ್ಯಕ್ತಗೊಂಡಿದೆ. | |
| **IX.** | **ಪದ್ಯಭಾಗ ಪೂರ್ಣಗೊಳಿಸಿ ಬರೆಯುವುದು :**<br>**(ತಪ್ಪಿಲ್ಲದೆ ಬರೆದ ಪೂರ್ಣಸಾಲುಗಳಿಗೆ ಒಟ್ಟಾರೆ ನಾಲ್ಕು ಅಂಕಗಳು)** | **1 × 4 = 4** |
| 34. | ಏಕಾಂಗಿ ವೀರನಂತೆ ..............................................<br>..................................................................<br>..................................................................<br>........................................... ಕತ್ತಲಲ್ಲಿ ನಡೆದನು<br><br>**ಅಥವಾ**<br><br>ಕಾಡು ಕಾಡು ..................................................<br>..................................................................<br>..................................................................<br>................................ ಮಹಾಬೆಳಕೊಂದು ಕಂಡಿತು | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | *ಉತ್ತರ :*<br>ಏಕಾಂಗಿ ವೀರನಂತೆ ಮಧ್ಯರಾತ್ರಿ ಎದ್ದನು<br>ಮಡದಿ ಮಗುವ ತೊರೆದನವನು ಅಡವಿ ದಾರಿ ಹಿಡಿದನು<br>ಅರಮನೆಯ ಮೋಹವನ್ನು ಹರಿದುಹಾಕಿ ಹೋದನು<br>ಗೊತ್ತು ಗುರಿಯು ಇಲ್ಲದಂತೆ ಕತ್ತಲಲ್ಲಿ ನಡೆದನು<br>**ಅಥವಾ**<br>ಕಾಡು ಕಾಡು ಅಲೆದ ಅವಗೆ ನಾಡಿನರ್ಥ ಹೊಳೆಯಿತು<br>ಕೋಗಿಲೆಯ ಹಾಡದೊಂದು ದೂರದಿಂದ ಕೇಳಿತು<br>ಬೆಳ್ಳಿಚುಕ್ಕಿ ಬಾನಿನಲ್ಲಿ ಆಗತಾನೆ ಬೆಳಗಿತು<br>ಬೋಧಿವೃಕ್ಷದಲ್ಲಿ ಮಹಾಬೆಳಕೊಂದು ಕಂಡಿತು | |
| **X.** | **ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು :** | **1 × 4 = 4** |
| | ವಿಷಯಾಂಶಕ್ಕೆ | 3 ಅಂಕಗಳು |
| | ಭಾಷಾಶೈಲಿ, ಪದ ಬಳಕೆಗೆ | 1 ಅಂಕ |
| | ಒಟ್ಟು | 4 ಅಂಕಗಳು |
| 35. | ಅಡಿಗರ ಪ್ರಕಾರ ಜೀವನ ಯಾವಾಗ ಸಾರ್ಥಕವಾಗುತ್ತದೆ ಎಂಬುದನ್ನು ನೀವು ಮೆಚ್ಚುವ ಅಂಶಗಳೊಂದಿಗೆ ಬರೆಯಿರಿ.<br>**ಅಥವಾ**<br>ಗುರಿ ಪದ್ಯದ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.<br>*ಉತ್ತರ :*<br>ಕವಿ ಗೋಪಾಲಕೃಷ್ಣ ಅಡಿಗರು ಹೇಳುವಂತೆ ಜೀವನದಲ್ಲಿ ಒಂದೇ ಒಂದು ಹೆಗ್ಗುರಿಯನ್ನು ಇಟ್ಟುಕೊಂಡು ಅದನ್ನು ಸಾಧಿಸುವುದಕ್ಕಾಗಿ ಹಗಲಿರುಳು ಶ್ರಮಿಸಬೇಕು. ನಾವು ಇಟ್ಟುಕೊಂಡ ಗುರಿ ನಮಗೂ, | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ದೇಶಕ್ಕೂ ಹಾಗೂ ಸಮಾಜಕ್ಕೂ ಒಳ್ಳೆಯದನ್ನು ಬಯಸುವಂತಿರಬೇಕು. ಸ್ವಾರ್ಥಿಗಳಾಗಬಾರದು, ಇತರ ಜೀವಿಗಳನ್ನು ಬಳಲಿಸಬಾರದು. ಪ್ರತಿಯೊಬ್ಬ ಮಾನವನಲ್ಲಿ ದೈವತ್ವವನ್ನು ಭೂಮಿಯಲ್ಲಿ ಸ್ವರ್ಗವನ್ನು ಕಾಣುತ್ತಾ ಪರಹಿತಕ್ಕಾಗಿ ಶ್ರಮಿಸಬೇಕು. ಇದುವೇ ಮನುಷ್ಯ ಜೀವನ. ಕಮಲದ ಹೂ ಕೆಸರಿನಲ್ಲಿಯೇ ಹುಟ್ಟಿದ್ದರೂ ಮೇಲೆ ಬಾಂದಳವನ್ನು ನೋಡಿ ಸೂರ್ಯನ ಕಿರಣಗಳಿಗೆ ಅರಳಿ ದೇವರ ಮುಡಿಸೇರಿ ಜೀವನ ಸಾರ್ಥಕ ಮಾಡಿಕೊಳ್ಳುತ್ತದೆ. ಹಾಗೆಯೇ ಮಾನವನು ತನ್ನ ಕೀಳರಿಮೆಯನ್ನು ತೊರೆದು ಜೀವನದ ಧ್ಯೇಯವನ್ನು ಸಾಧಿಸಲು ನಗುತ್ತಾ ಮುನ್ನುಗ್ಗಿದಾಗ ಜೀವನ ಸಾರ್ಥಕವಾಗುತ್ತದೆ ಎಂದು ಕವಿ ಹೇಳಿದ್ದಾರೆ. | |
| | **ಅಥವಾ** | |
| | ಜೀವನಕ್ಕೆ ಒಂದು ಉತ್ತಮವಾದ ಗುರಿ ಇರಬೇಕು. ಆಗ ಜೀವನ ಸಾರ್ಥಕವಾಗುತ್ತದೆ. ಕಮಲ ಕೆಸರೊಳಗೆ ಹುಟ್ಟಿದ್ದರೂ ದೇವರ ಮುಡಿಸೇರಿ ಸಾರ್ಥಕತೆ ಪಡೆದುಕೊಳ್ಳುತ್ತದೆ. ರವಿಕಿರಣಗಳ ಸಿರಿಗೆ ಮೆರೆದಾಡಿ ವಿಜೃಂಭಿಸುತ್ತದೆ. ಅದೇ ರೀತಿ ನಾವು ಸಹಿತ ಶ್ರೇಷ್ಠವಾದ ಗುರಿಯನ್ನು ತಲುಪಿ ಸಾರ್ಥಕತೆಯನ್ನು ಹೊಂದಬೇಕು. ಗುರಿಯನ್ನು ಸಾಧಿಸುವಾಗ ಯಾವುದೇ ಅಡಚಣೆಗಳು, ತೊಂದರೆಗಳು ಎದುರಾದಾಗ ಅವುಗಳಿಗೆ ಹೆದರುವ ಹೇಡಿತನವನ್ನು, ಹೆಣ್ತನವನ್ನು ತೋರಬಾರದು. ಹಿಡಿದ ದಾರಿಯಲ್ಲಿ ಗುರಿಯನ್ನು ತಲುಪಲು ಪೌರುಷದಿಂದ ಮುನ್ನಡೆಯಬೇಕು. ಒಂದು | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಬಾಣಕ್ಕೆ ಒಂದೇ ಗುರಿ, ಒಂದು ದೇಹಕ್ಕೆ ಒಂದೇ ಆತ್ಮವಿರುತ್ತದೆ. ಆದ್ದರಿಂದ ನಮ್ಮ ಜೀವನಕ್ಕೆ ಏಕೆ ಹಲವು ಗುರಿಗಳು ಬೇಕು ? ಒಂದೇ ಹೆಗ್ಗುರಿಯನ್ನು ಇಟ್ಟುಕೊಂಡು ಅದನ್ನು ಸಾಧಿಸುವುದಕ್ಕಾಗಿ ಹಗಲಿರುಳು ಶ್ರಮಿಸಬೇಕು. ನರದೊಳಗೆ ನಾರಾಯಣನ ರೂಪ, ಭೂಮಿಯಲ್ಲಿ ಸ್ವರ್ಗವನ್ನು ಕಾಣುತ್ತಾ, ಪರಹಿತ ಕಾರ್ಯ ಮಾಡುತ್ತಾ ಜೀವನ ನಡೆಸಬೇಕು ಆಗ ಮನುಷ್ಯ ಜೀವನ ಸಾರ್ಥಕವಾಗುತ್ತದೆ. ಜೀವನದಲ್ಲಿ ಸ್ವಾರ್ಥ ತುಂಬಿದ ಗುರಿಯನ್ನು ಹೊಂದಿದ್ದರೆ ಅದು ನಮಗೆ ಅಪಕೀರ್ತಿಯನ್ನು ತರುತ್ತದೆ ಎಂಬುದು ಗುರಿ ಪದ್ಯದ ಸಾರಾಂಶವಾಗಿದೆ. | |
| **XI.** | **ಗದ್ಯಭಾಗವನ್ನು ಓದಿಕೊಂಡು, ಪ್ರಶ್ನೆಗಳಿಗೆ ಉತ್ತರಿಸುವುದು :**<br>**(ಅಂಶಗಳನ್ನಾಧರಿಸಿ ಪ್ರತಿ ಸರಿಯುತ್ತರಕ್ಕೆ 2 ಅಂಕಗಳು)** | **1 × 4 = 4**<br>**( 2 + 2 )** |
| 36. | ರಾಜರ್ಷಿಗಳು, ನಿಸರ್ಗ ಪ್ರಿಯರೂ ಆದ ನಾಲ್ವಡಿ ಕೃಷ್ಣರಾಜ ಒಡೆಯರು ಸಹ್ಯಾದ್ರಿಯ ಸೊಬಗನ್ನು ಕಂಡು ತಮ್ಮ ಬೇಸಿಗೆ ನಿವಾಸವನ್ನು ಕೆಮ್ಮಣ್ಣುಗುಂಡಿಯಲ್ಲಿ ಕಟ್ಟಿಸಿದರು. ಇದನ್ನು ಬೇಸಿಗೆ ಗಿರಿಧಾಮವೆಂದು ಕರೆಯುತ್ತಾರೆ. ಬೆಟ್ಟದ ಮಡಿಲಲ್ಲಿರುವ ದೊಡ್ಡಬ್ಬೆ ಜಲಪಾತದ ನೀರು ನಲ್ಲಿಗಳ ಮೂಲಕ ಗಿರಿಧಾಮದ ನಿವಾಸಿಗಳಿಗೆ ಹಾಗೂ ತೋಟಕ್ಕೆ ಬರುತ್ತದೆ. ಈ ನೀರು ಬೆಟ್ಟದಲ್ಲಿರುವ ವನಸ್ಪತಿಗಳ ಮಧ್ಯದಲ್ಲಿ ಹಾಯ್ದು ಬರುತ್ತದೆ ಹಾಗೂ ಬೆಟ್ಟವು ಲೋಹಾಂಶದಿಂದ ಕೂಡಿದೆ. ಅದರಿಂದಾಗಿ ಈ ನೀರು ಲೋಹಾಂಶ ಮತ್ತು ವನಸ್ಪತಿಗಳ ಅಂಶದಿಂದ ಕೂಡಿರುವುದರಿಂದ ಆರೋಗ್ಯ ವರ್ಧನೆಗೆ ಸಹಕಾರಿಯಾಗಿದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಕೆಮ್ಮಣ್ಣುಗುಂಡಿಯ ಪರ್ವತಗಳು ಬಿಸಿಲಿಗೆ ಒಣಗದೆ, ಚಳಿಗೆ ಕುಗ್ಗದೆ, ಮಳೆಗೆ ಅಂಜದೆ ಸದಾ ಹಸಿರುಡುಗೆಯನ್ನುಟ್ಟು ನಿಂತಿರುವ ಸಹ್ಯಾದ್ರಿ ಪರ್ವತಗಳು ಸೊಬಗಿನ ತವನಿಧಿಯಾಗಿವೆ. ಗಿರಿಧಾಮಗಳಲ್ಲಿ ವಿದ್ಯುತ್, ಹಾಸಿಗೆ-ಹೊದಿಕೆ, ಅಡಿಗೆ-ಊಟಗಳಿಗೆ ಬೇಕಾಗುವ ಸಾಮಾಗ್ರಿಗಳ ಸೌಲಭ್ಯವೂ ಇದೆ. ಈ ಗಿರಿಧಾಮಗಳಲ್ಲಿ ತಂಗುವುದರಿಂದ ಮನದ ಜಾಡ್ಯವಳಿದು ಹೊಸ ಚೈತನ್ಯ ಹೊರಹೊಮ್ಮುವುದು. ಮನಸ್ಸಿಗೆ ಶಾಂತಿ, ದೇಹಕ್ಕೆ ಸೌಖ್ಯ, ಆತ್ಮಕ್ಕೆ ತೃಪ್ತಿತರುತ್ತದೆ. ಅಲ್ಲದೇ ಮಾನವನ ಅಂತರಂಗದ ವಿಕಾಸವಾಗುವುದರೊಂದಿಗೆ ಆತ್ಮಸಂತೋಷವು ದೊರೆಯುತ್ತದೆ. ಇವು ಗಿರಿಧಾಮಗಳಿಂದ ಆಗುವ ಪ್ರಯೋಜನಗಳಾಗಿವೆ. ಗಿರಿಧಾಮಗಳಲ್ಲಿ ಕುಳಿತು ಬೆಟ್ಟಗಳನ್ನು ನೋಡುತ್ತಿದ್ದರೆ ಅಲ್ಲಿ ಕಾಣುವ ಸೊಬಗಿನ ಎದುರು ರಾಜವೈಭವ ತೃಣ ಸಮಾನವೆನಿಸುವುದು.<br><br>***ಪ್ರಶ್ನೆಗಳು:***<br><br>ಅ) ಗಿರಿಧಾಮಗಳಲ್ಲಿ ತಂಗುವುದರಿಂದ ಆಗುವ ಪ್ರಯೋಜನಗಳಾವುವು ?<br><br>ಆ) ದೊಡ್ಡಬ್ಬೆ ಜಲಪಾತದ ನೀರು ಆರೋಗ್ಯವರ್ಧನೆಗೆ ಹೇಗೆ ಸಹಕಾರಿಯಾಗಿದೆ ?<br><br>***ಉತ್ತರ :***<br><br>ಅ) ಗಿರಿಧಾಮಗಳಲ್ಲಿ ತಂಗುವುದರಿಂದ ಮನದ ಜಾಡ್ಯವಳಿದು ಹೊಸ ಚೈತನ್ಯ ಹೊರಹೊಮ್ಮುವುದು. ಮನಸ್ಸಿಗೆ ಶಾಂತಿ, ದೇಹಕ್ಕೆ ಸೌಖ್ಯ, | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಆತ್ಮಕ್ಕೆ ತೃಪ್ತಿ ಸಿಗುತ್ತದೆ. ಅಲ್ಲದೇ ಮಾನವನ ಅಂತರಂಗದ ವಿಕಾಸವಾಗುವುದರೊಂದಿಗೆ ಆತ್ಮಸಂತೋಷವು ದೊರೆಯುತ್ತದೆ. ಇವು ಗಿರಿಧಾಮಗಳಿಂದಾಗುವ ಪ್ರಯೋಜನಗಳಾಗಿವೆ. | |
| | ಆ) ದೊಡ್ಡಬ್ಬೆ ಜಲಪಾತದ ನೀರು ನಲ್ಲಿಗಳ ಮೂಲಕ ಗಿರಿಧಾಮದ ನಿವಾಸಿಗಳಿಗೆ ಹಾಗೂ ತೋಟಕ್ಕೆ ಬರುತ್ತದೆ. ಈ ನೀರು ಬೆಟ್ಟದಲ್ಲಿರುವ ವನಸ್ಪತಿಗಳ ಮಧ್ಯದಲ್ಲಿ ಹಾಯ್ದು ಬರುತ್ತದೆ ಹಾಗೂ ಬೆಟ್ಟವು ಲೋಹಾಂಶದಿಂದ ಕೂಡಿದೆ. ಅದರಿಂದಾಗಿ ಈ ನೀರು ಲೋಹಾಂಶ ಮತ್ತು ವನಸ್ಪತಿಗಳ ಅಂಶದಿಂದ ಕೂಡಿರುವುದರಿಂದ ಆರೋಗ್ಯ ವರ್ಧನೆಗೆ ಸಹಕಾರಿಯಾಗಿದೆ. | |
| **XII.** | **ಪ್ರಬಂಧ ಬರೆವಣಿಗೆ : (ಯಾವುದಾದರೂ ಒಂದಕ್ಕೆ ಮಾತ್ರ)** | **1 × 4 = 4** |
| | ಪೀಠಿಕೆ / ಪ್ರಸ್ತಾವನೆ | 1 ಅಂಕ |
| | ವಿಷಯ ನಿರೂಪಣೆ | 2 ಅಂಕಗಳು |
| | ಭಾಷಾಶೈಲಿಗೆ, ಮುಕ್ತಾಯ / ಉಪಸಂಹಾರ | 1 ಅಂಕ |
| | ಒಟ್ಟು | 4 ಅಂಕಗಳು |
| 37. | ದಿನಪತ್ರಿಕೆಗಳ ಮಹತ್ವ<br>**ಅಥವಾ**<br>ಅರಣ್ಯ ಸಂರಕ್ಷಣೆಯ ಅಗತ್ಯತೆ | |
| **XIII.** | **ಪತ್ರ ಲೇಖನ ಬರೆಯುವುದು : (ಯಾವುದಾದರೂ ಒಂದಕ್ಕೆ ಮಾತ್ರ)** | **1 × 5 = 5** |
| 38. | ನಿಮ್ಮನ್ನು ಬಾಗಲಕೋಟೆಯ ವಿವೇಕನಗರದ ನಿವಾಸಿ 'ಮಹೇಶ' ಎಂದು ಭಾವಿಸಿಕೊಂಡು, ನೀವು ವಾಸಿಸುವ ಪ್ರದೇಶದಲ್ಲಿ 'ಪ್ರಾಥಮಿಕ ಆರೋಗ್ಯ ಕೇಂದ್ರ' ತೆರೆಯುವಂತೆ ಕೋರಿ ಜಿಲ್ಲಾಧಿಕಾರಿಗಳಿಗೆ ಒಂದು ಮನವಿ ಪತ್ರವನ್ನು ಬರೆಯಿರಿ.<br>**ಅಥವಾ** | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ನಿಮ್ಮನ್ನು ಬಸವಕಲ್ಯಾಣ ನಿವಾಸಿ 'ಸಂಗೀತಾ' ಎಂದು ಭಾವಿಸಿಕೊಂಡು, ನಿಮ್ಮೂರ ಜಾತ್ರೆಗೆ ಬರುವಂತೆ ಕೋರಿ ಬೀದರಿನ ಶರಣನಗರದಲ್ಲಿ ವಾಸವಾಗಿರುವ 'ಕಲ್ಪನಾ' ಎಂಬ ಹೆಸರಿನ ಗೆಳತಿಗೆ ಪತ್ರವನ್ನು ಬರೆಯಿರಿ. | |
| | ***ಉತ್ತರ :*** | |
| | *ವ್ಯಾವಹಾರಿಕ ಪತ್ರ :* | |
| | ಇಂದ ವಿಳಾಸ, ಗೆ ವಿಳಾಸ, ಸಂಬೋಧನೆ, ವಿಷಯ | 1 ಅಂಕ |
| | ಪತ್ರದ ಒಡಲು | 2 ಅಂಕಗಳು |
| | ಸಹಿಯೊಂದಿಗೆ ಮುಕ್ತಾಯ, ಸ್ಥಳ, ದಿನಾಂಕ | 1 ಅಂಕ |
| | ವಿನ್ಯಾಸ, ಪದಬಳಕೆ, ಶೈಲಿ | 1 ಅಂಕ |
| | ಒಟ್ಟು | 5 ಅಂಕಗಳು |
| | **ಅಥವಾ** | |
| | *ವೈಯಕ್ತಿಕ ಪತ್ರ :* | |
| | ಇಂದ ವಿಳಾಸ, ಸ್ಥಳ, ದಿನಾಂಕ, ಪ್ರಾರಂಭದ ಒಕ್ಕಣೆ | 1 ಅಂಕ |
| | ಪತ್ರದ ಒಡಲು | 2 ಅಂಕಗಳು |
| | ಸಹಿಯೊಂದಿಗೆ ಮುಕ್ತಾಯ, ಗೆ ವಿಳಾಸ | 1 ಅಂಕ |
| | ವಿನ್ಯಾಸ, ಪದಬಳಕೆ, ಶೈಲಿ | 1 ಅಂಕ |
| | ಒಟ್ಟು | 5 ಅಂಕಗಳು |